*MVC No: 4436/2022*
*C/w 4435/2022*
*PW-4*

**ಸಾಕ್ಷಿಗೆ ದಿನಾಂಕ 27-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ. ವಿ ಎಸ್ ಎನ್ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದ ನನ್ನ ಸಹೋದ್ಯೋಗಿ ಡಾ. ರಾಕೇಶ್ ರವರು ಚಿಕಿತ್ಸೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವುದಕ್ಕಿಂತ ಮುಂಚೆ ಬೇರೆ ಆಸ್ಪತ್ರೆಗೆ ಹೋಗಿದ್ದರಾ ಎಂದರೆ ಆರ್ ಎಲ್ ಜಾಲಪ್ಪ ಆಸ್ಪತ್ರೆಗೆ ಹೋಗಿದ್ದರು. ಆರ್ ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಔಪಚಾರಿಕ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಅದರ ಬಗ್ಗ ಮಾಹಿತಿ ಇರುವುದಿಲ್ಲ. ಅರ್ಜಿದಾರರ ರಕ್ತಪರೀಕ್ಷಾ ವರದಿ, ಮಧಮೇಹ ವರದಿಯನ್ನು ಪಡೆದಿರುತ್ತೇನೆ. ಅರ್ಜಿದಾರರು ಮಧುಮೇಹ ರೋಗಿ ಎಂದರೆ ಸರಿ.

2. ಅರ್ಜಿದಾರರು ಆರ್ ಎಲ್ ಜಾಲಪ್ಪ ಆಸ್ಪತ್ರೆಯಿಂದ ಬರುವಾಗ ಗಾಯಕ್ಕೆ ಬ್ಯಾಂಡೇಜ್ ಪಟ್ಟಿ ಹಾಕಿಕೊಂಡಿದ್ದರು ಎಂದರೆ ಸರಿ, ಸದರಿ ಬ್ಯಾಂಡೇಜ್ ಪಟ್ಟಿಯನ್ನು ನಮ್ಮ ಆಸ್ಪತ್ರೆಯಲ್ಲಿ ತೆಗೆದಿರುತ್ತೇವೆ ಎಂದರೆ ಸರಿ. ಅರ್ಜಿದಾರಳು ಆಸ್ಪತ್ರೆಗೆ ದಾಖಲಾದ 12 ಗಂಟೆಯೊಳಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದರೆ ಸರಿ. ಅರ್ಜಿದಾರಳ ಗಾಯವನ್ನು ನಮ್ಮ ಆಸ್ಪತ್ರೆಯಲ್ಲಿ ಸ್ವಚ್ಛಗೊಳಿಸಲಾಗಿರುತ್ತದೆ. ಗಾಯವನ್ನು ಸ್ವಚ್ಛಗೊಳಿಸಿದ ನಂತರ ನಂಜು ಆಗದೇ ಇರುವುದನ್ನು ಗಮನಿಸಿ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ ಎಂದರೆ ಸರಿ.

3. ಅರ್ಜಿದಾರಳಿಗೆ ಒಳಜೋಡಣೆ ಹಾಕಿದ ನಂತರ ಎಕ್ಸ್ ರೇ ತೆಗೆಯಲಾಗಿದೆ ಎಂದರೆ ಸರಿ. ಎಕ್ಸ್-ರೇ ಪರಶೀಲಿಸಿದ ನಂತರ ಅರ್ಜಿದಾರಳ ಮೂಳೆ ಸರಿಯಾದ ಜಾಗಕ್ಕೆ ಕೂಡಿಸಲಾಗಿದೆ ಎಂದರೆ ಸರಿ. ಅರ್ಜಿದಾರಳ ಎಡಗಾಲಿನ 1/3 ನೇ ಭಾಗದಲ್ಲಿ ಮೂಳೆಮುರಿತ ಉಂಟಾಗಿದೆ ಎಂದರೆ ಸರಿ. ದಾಖಲೆಗಳ ಪ್ರಕಾರ ಅರ್ಜಿದಾರಳ ಮೂಳೆ ಎರಡಕ್ಕಿಂತ ಹೆಚ್ಚಿನ ಮೂಳೆ ಮುರಿತ ಉಂಟಾಗಿಲ್ಲ ಎಂದರೆ ಸರಿ. ಫಿಬೂಲ ಮಧ್ಯದಲ್ಲಿ 1/3 ರಷ್ಟು ಭಾಗ ಟಿಬಿಯಾ ಕೆಳಭಾಗ 1/3 ರಷ್ಟು

ಮೂಳೆಮುರಿತ ಉಂಟಾಗಿಲ್ಲ ಎಂದರೆ ಸರಿ. ಎರಡು ಮೂಳೆಮುರಿತಗಳನ್ನು ಸಾಮಾನ್ಯ ಸ್ಥಿತಿಗೆ ತರಲಾಗಿದೆ ಎಂದರೆ ಸರಿ. ಟಿಬಿಯಾ ಮೂಳೆಮುರಿತ ಕೂಡಿಕೊಂಡಿದೆ ಎಂದರೆ ಸರಿ. ಫಿಬೂಲ ಮೂಳೆಮುರಿತ ಕೂಡಿಕೊಂಡಿರುವುದಿಲ್ಲ.

4. ಫಿಬೂಲ ಮೂಳೆ ಟಿಬಿಯಾ ಮೂಳೆಗೆ ಸಹಾಯಕ ಮೂಳೆ ಎಂದರೆ ಸರಿ. ಫಿಬೂಲಾ ಮೂಳೆಮುರಿತದಿಂದ ಯಾವುದೇ ಅಂಗನ್ಯೂನತೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಟಿಬಿಯಾ ಮೂಳೆ ಮುರಿತ ಕೂಡಿಕೊಳ್ಳಲು 6-9 ವಾರಗಳ ಕಾಲ ಅವಧಿ ಬೇಕಾಗುತ್ತದೆ. ತೆರೆದ ಗಾಯ ಮುಚ್ಚಿದ ಗಾಯವಾಗಿರುತ್ತದೆ ಎಂದರೆ ಸರಿ. ಇತ್ತೀಚಿಗೆ ಅರ್ಜಿದಾರಳನ್ನು ಪರೀಕ್ಷಿಸಿದಾಗ ಯಾವುದೇ ನಂಜು ಕಂಡು ಬಂದಿರುವುದಿಲ್ಲ. ಹಿಮ್ಮಡಿಯ ಚಲನ-ವಲನ ಕುಂಠಿತಗೊಂಡಿರುವುದಿಲ್ಲ. ಹಿಮ್ಮಡಿಯ ಸಂಧಿಗೆ ಯಾವುದೇ ಮೂಳೆಮುರಿತ ಉಂಟಾಗಿರುವುದಿಲ್ಲ ಎಂದರೆ ಸರಿ. ಅರ್ಜಿದಾರಳಿಗೆ ಭೌತಿಕ ಚಿಕಿತ್ಸೆ ಪಡೆಯಲು ಸಲಹೆ ನೀಡಿರುತ್ತೇವೆ ಎಂದರೆ ಸರಿ. ಅರ್ಜಿದಾರಳಿಗೆ ಸೂಕ್ತವಾದ ವ್ಯಾಯಾಮ ಹೇಳಿಕೊಟ್ಟಿರುತ್ತೇವೆ ಎಂದರೆ ಸರಿ. ಅರ್ಜಿದಾರಳಿಗೆ ಯಾವುದೇ ನರರೋಗ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರಳ ಟಿಸ್ಯೂ ನಷ್ಟವಾಗಿದ್ದರೂ ಸಹ ಮತ್ತು ಪುನರ್ಜೀವನ ಮಾಡಲಾಗಿದೆ.

5. ಅರ್ಜಿದಾರಳ ಒಳಜೋಡಣೆ ಹಾಗೆಯೇ ಇರುತ್ತದೆ. ಅರ್ಜಿದಾರಳ ಒಳಜೋಡಣೆ ತೆಗೆಯಬಹುದು. ಅರ್ಜಿದಾರಳ ಒಳಜೋಡಣೆ ತೆಗೆದ ನಂತರ ಭೌತಿಕ ಚಿಕಿತ್ಸೆ ಪಡೆದರೆ ಅರ್ಜಿದಾರಳ ಚಲನ-ವಲನ ಸಾಮಾನ್ಯವಾಗುವುದು ಎಂದರೆ  ಸರಿಯಲ್ಲ. ಎರಡು ಮೂಳೆಗಳು ಒಂದಕ್ಕೊಂದು ಘರ್ಷಣೆ ಮಾಡುವುದರಿಂದ ಸಂಧಿಯಲ್ಲಿ ಕೀಲು ನೋವು ಬರುತ್ತದೆ ಎಂದರೆ ಸರಿ. ಸಂಧಿಯಲ್ಲಿ ಗಾಯವಾಗದೇ ಇದ್ದರೇ ಕೀಲು ನೋವು ಬರುವ ಸಾಧ್ಯತೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮುಚ್ಚಿ ದ ಗಾಯದಲ್ಲಿ ಕೀಲು ನೋವು ಉಂಟಾಗುವುದಿಲ್ಲ ಆದರೆ ತೆರೆದ ಗಾಯದಲ್ಲಿ ರಕ್ತ ಚಲನೆ ಕಡಿಮೆಯಾಗುವುದರಿಂದ ಕೀಲು ನೋವು ಉಂಟಾಗುತ್ತದೆ.

6. ಅರ್ಜಿದಾರಳಿಗೆ ಉಂಟಾಗಿರುವ ಮೂಳೆಮುರಿತದಲ್ಲಿ ರಕ್ತದ ಚಲನೆ ಕಡಿಮೆಯಾಗಿದೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ತೆರೆದ ಗಾಯದಲ್ಲಿ ರಕ್ತ ಚಲನೆ ಕಡಿಮೆಯಾಗುವುದು ಸಹಜವಾಗಿರುತ್ತದೆ. ಅರ್ಜಿದಾರಳ ಮೂಳೆಮುರಿತದ ಸ್ಥಳಕ್ಕೂ ಮತ್ತು ಹಿಮ್ಮಡಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳ ಹಿಮ್ಮಡಿ ಸಂಧಿಗೆ ಸಂಬಂಧಪಟ್ಟಂತೆ ಲಿಗಮೆಂಟಲ್ ಟೀಯರ್ ಗೆ ಸಂಬಂಧಿಸಿದಂತೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಅರ್ಜಿದಾರಳಿಗೆ ಲಿಗಮೆಂಟಲ್ ಟೀಯರ್ ಗೆ ಸಂಬಂಧಪಟ್ಟ ಯಾವುದೇ ನ್ಯೂನತೆಗಳು ಇಲ್ಲದೇ ಇದ್ದಾಗ loss of corteges ಬರುವ ಸಾಧ್ಯತೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.32 ರಲ್ಲಿ loss of corteges ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

7. ಅರ್ಜಿದಾರಳು ಮಧುಮೇಹ ರೋಗಿಯಾಗಿರುವುದರಿಂದ ಮತ್ತು ವಯೋಸಹಜ ಖಾಯಿಲೆಗಳು ಇರುವುರಿಂದ ಅರ್ಜಿದಾರಳು ಕೀಲು ನೋವಿನಿಂದ ಬಳಲುತ್ತಿದ್ದಾಳೆ ಎಂದರೆ ಸರಿಯಲ್ಲ. ಅರ್ಜಿದಾರಳ ಮೂಳೆಮುರಿತ ಸ್ಥಳವು ಕೀಲು ನೋವಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿ.

8. ಅರ್ಜಿದಾರಳ ಎಡಗೈನ ಹೆಬ್ಬೆಟ್ಟನ್ನು ಮಾತ್ರ ಕತ್ತರಿಸಲಾಗಿದೆ ಎಂದರೆ ಸರಿ. ಅರ್ಜಿದಾರಳ ಎಡಗೈ ಹೆಬ್ಬೆಟ್ಟಿನ ಮೂಳೆಮುರಿತ ಮುಚ್ಚಿದ ಮೂಳೆಮುರಿತವಾಗಿರುತ್ತದೆ. ಅರ್ಜಿದಾರಳ ಮೂಳೆಮುರಿತವನ್ನು ಕೂಡಿಸಲು ಕೆ-ವೈರ್ ಹಾಕಿರುತ್ತಾರೆ ಎಂದರೆ ಸರಿ. ಸದರಿ ಕೇ-ವೈರ್ ನ್ನು 4-6 ವಾರಗಳಲ್ಲಿ ತೆಗೆಯಬೇಕು ಎಂದರೆ ಸರಿ. ಅರ್ಜಿದಾರಳ ಎಡಗೈನ ಹೆಬ್ಬೆಟ್ಟಿನ ಮೂಳೆಮುರಿತ ಕೂಡಿಕೊಂಡಿದೆ ಎಂದರೆ ಸ್ವಲ್ಪ ಪ್ರಮಾಣದಲ್ಲಿ ಜರಗಿರುತ್ತದೆ. ಅರ್ಜಿದಾರಳ ಎಡಗೈ ಹೆಬ್ಬೆಟ್ಟಿನ ಮೂಳೆಮುರಿತ ಸಾಮಾನ್ಯ ಸ್ವರೂಪದ್ದು ಎಂದರೆ ಸರಿಯಲ್ಲ. ಅರ್ಜಿದಾರಳ ಎಡಗೈ ಹೆಬ್ಬೆಟ್ಟಿನ ಚಲನ ವಲನ ಸಾಮಾನ್ಯವಾಗಿದೆ ಎಂದರೆ ಸರಿ. ಅರ್ಜಿದಾರಳ ಎಡಗೈ ಹೆಬ್ಬೆಟ್ಟಿ ಸಂಬಂಧಿಸಿದಂತೆ ಭೌತಿಕ ಚಿಕಿತ್ಸೆ ನೀಡಲಾಗಿರುತ್ತದೆ.

9. ಅರ್ಜಿದಾರಳ ಎಡಗೈ ಹೆಬ್ಬೆಟ್ಟಿನ ಮೂಳೆಮುರಿತದಲ್ಲಿ ನಂಜು ಇರುವುದಿಲ್ಲ ಎಂದರೆ ಸರಿ. ಅರ್ಜಿದಾರಳಿಗೆ ಅಳವಡಿಸಲಾಗಿದ ಕೇ-ವೈರ್ ತೆಗೆಯಲಾಗಿದೆ ಎಂದರೆ ಸರಿ. ಅರ್ಜಿದಾರಳು ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಪುನಃ ಮುಂದುವರೆದ ಚಿಕಿತ್ಸೆಗೆ ನಮ್ಮ ಬಳಿ ಬಂದಿರುವುದಿಲ್ಲ ಎಂದರೆ ಸರಿ. ಇತ್ತೀಚಿಗೆ ಅರ್ಜಿದಾರಳನ್ನು ಪರೀಕ್ಷಿಸಿದ ನಂತರ ಮುಂದುವರೆದ ಚಿಕಿತ್ಸೆಗೆ ಸಲಹೆ ನೀಡಿರುತ್ತೇನೆ. ಅರ್ಜಿದಾರಳಿಗೆ ಚಲನ-ವಲನ ಮತ್ತು ಸಾಮರ್ಥ್ಯಕ್ಕೆ ನೀಡಲಾದ ಅಂಕಗಳು ಸರಿಯಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳ ಮಾಂಸಖಂಡ ಮತ್ತು ಶಕ್ತಿ ಸಾಮಾನ್ಯವಾಗಿದೆ ಎಂದರೆ ಸರಿ.

10. ಅರ್ಜಿದಾರಳ ನಿಗಧಿತ ಅಂಗಕ್ಕೆ ನೀಡಲಾದ ಅಂಗನ್ಯೂನತೆಯಾ ಶೇಕಡಾ ½ ರಷ್ಟು ಭಾಗವನ್ನು ಸಂಪೂರ್ಣ ದೇಹಕ್ಕೆ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ನೀಡಲಾದ ಅಂಗನ್ಯೂನತೆ ಅತೀ ಹೆಚ್ಚಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**